# ವಚನ ಸಾಹಿತ್ಯದ ಬೆಳವಣಿಗೆ

**ರಮೇಶ್ ಸಿ,**

**ಪ್ರವೇಶ**

ಶರಣರ ಬಹುಮುಖ ವಿಚಾರ ಕ್ರಾಂತಿ ಅಂದಿನ ಜನ ಜೀವನದ ಎಲ್ಲಾ ರಂಗಗಳನ್ನು ವ್ಯಾಪಿಸಿದಂತೆ ಕನ್ನಡ ಸಾಹಿತ್ಯದ ಪಂಕ್ತಿಯಲ್ಲಿ ಹೊಸ ನಾದವನ್ನು ಹಿಡಿಯಿತು·ಆಗ ಕನ್ನಡ ಭಾಷೆಗೆ ಹೊಸ ಶಕ್ತಿಯೊಂದು ಬಂದಂತಾಗಿ ಅದು ಶರಣರ ವಿಚಾರ ವೈಭವವನ್ನು ಹೊತ್ತು ತರುವ ವಾಹನವಾಗಿ ಪರಿಣಮಿಸಿತು·ಶರಣರು ತಮ್ಮ ಗಹನವಾದ ಆಲೋಚನೆಗಳನ್ನು ತಿಳಿಸಲು ಸಂಸ್ಕೃತದ ಮೊರೆ ಹೋಗದೆ ಕನ್ನಡವನ್ನು ಅವಲಂಬಿಸಿದ್ದ ಕಾರಣ ವಚನ ಸಾಹಿತ್ಯೋದಯದ ಬಾಗಿಲು ತನಗರಿವಿಲ್ಲದಂತೆ ತಾನಾಗಿಯೇ ತೆರೆಯಿತು·ಕನ್ನಡ ಸಾಹಿತ್ಯ ಅದುವರೆಗೂ ಹೊಸ ಹೊಸ ಪ್ರಯೋಗ ಮತ್ತು ಪರೀಕ್ಷೆಗಳ ವೈಭವವಿಲ್ಲದೆ ನಿಂತ ನೀರಾಗಿದ್ದ ಕಾಲದಲ್ಲಿ ವಚನ ಸಾಹಿತ್ಯ ಪ್ರವಾಹದ ರೀತಿಯಲ್ಲಿ ಹರಿದು ಬಂತು·ಶರಣರ ಒಂದೊಂದು ನುಡಿಯು ಮನುಕುಲವನ್ನು,ವಿಶ್ವವನ್ನು,ಮಾನವನನ್ನು ಜಾಗೃತಗೊಳಿಸಲೆಂದೇ ಉದ್ದೇಶಿಸದ್ದಾಗಿದೆ·ಮಾನವ ಯಾವುದೇ ದೇಶದ ಮಾನವನಾದರೂ ಮಾನವ ಮಾನವನೇ· ಕಾಮ, ಕ್ರೋದ, ಲೋಭ, ಮೋಹ, ಮದ ಹಾಗು ಮತ್ಸರ ಹೀಗೆ ಹುಟ್ಟುಗುಣ ಪ್ರಚೋಧಿತ ಪ್ರಾಥಮಿಕ ಮಾನವನನ್ನು ನಾಗರೀಕವಾಗಿ, ಸಾಂಸ್ಕೃತಿಕವಾಗಿ, ನೈತಿಕವಾಗಿ, ಧಾರ್ಮಿಕವಾಗಿ ಸಂಸ್ಕರಿಸುವ ಉದ್ದೇಶದಿಂದ ಶರಣರು ನುಡಿದ ನುಡಿಮುತ್ತುಗಳಿವು· ಇಂದಿನವರೆಗೆ ಸಂಶೋಧನೆಯ ಫಲವಾಗಿ ನಮಗೆ ಸುಮಾರು *304* ವಚನಕಾರರೂ,*42* ವಚನಗಾರ್ತಿಯರೂ ಉಲ್ಲೇಖಕ್ಕೆ ಸಿಗುತ್ತಾರೆ· ಕನ್ನಡದ ವಚನ ಸಾಹಿತ್ಯ ಲಭ್ಯವಾಗಿರುವ ಸಾಹಿತ್ಯಕ್ಕಿಂತ ಕಳೆದು ಹೋದ ಸಾಹಿತ್ಯವೇ ಹೆಚ್ಚಾಗಿರುತ್ತದೆ· ಭಾರತೀಯ ಸಾಹಿತ್ಯ ಹಾಗು ವಿಶ್ವ ಸಾಹಿತ್ಯಕ್ಕೆ ಕನ್ನಡ ಭಾಷೆಯ ಅಮೂಲ್ಯ ಕೊಡುಗೆ ವಚನ ಸಾಹಿತ್ಯ·ಕನ್ನಡ ಸಾಹಿತ್ಯಕ್ಕೆ ಕೊಡಮಾಡಿದ ಅನರ್ಘ್ಯ ಸಾಹಿತ್ಯ ರತ್ನ ಇದಾಗಿದೆ·ಹನ್ನೆರಡನೇ ಶತಮಾನದ ವಚನ ಸಾಹಿತ್ಯ ಶರಣರು ಕನ್ನಡಕ್ಕೆ ಕೊಟ್ಟ ಲೋಕ ಕಾಣಿಕೆ·ವಚನಗಳು ಕನ್ನಡ ಸಾಹಿತ್ಯ ಭಂಡಾರದ ಅಮೂಲ್ಯ ರತ್ನಗಳಾಗಿ ವಿಶ್ವ ಸಾಹಿತ್ಯ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಬೆಲೆಯನ್ನು ಹೆಚ್ಚಿಸಿವೆ·ಕನ್ನಡದ ಉಪನಿಷತ್ ಎಂದು ಇದನ್ನು ಬಣ್ಣಿಸಲಾಗಿದೆ·ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ·ಈ ವಚನಗಳು ‘ಆತ್ಮಕಲ್ಯಾಣ ಮತ್ತು ಲೋಕ ಕಲ್ಯಾಣ’ಗಳೆರಡನ್ನು ಏಕಕಾಲಕ್ಕೆ ಸಾಧಿಸಿವೆ·ಇವು ಧರ್ಮವನ್ನು ಬೋಧಿಸುವುದರಿಂದ ‘ಧರ್ಮಗ್ರಂಥ’ವೆಂತಲೂ,ತತ್ವವನ್ನು ಬೋಧಿಸುವುದರಿಂದ ‘ಸಿದ್ಧಾಂತ ಗ್ರಂಥ’ಗಳೆಂದು, ಉತ್ತಮವಾದ ಕಾವ್ಯಲಕ್ಷಣಗಳನ್ನು ಹೊಂದಿರುವುದರಿಂದ ‘ಸಾಹಿತ್ಯ ಗ್ರಂಥ’ಗಳೆಂದು ಹೆಸರು ಪಡೆದಿವೆ·

**ವಚನ ಸಾಹಿತ್ಯದ ಅರ್ಥ**: ಸಂಸ್ಕೃತದಲ್ಲಿ ವಚನ ಎಂದರೆ ಮಾತು, ಮಾತನಾಡುವುದು,ಅಭಿವ್ಯಕ್ತಿಸುವುದು ಎಂಬ ಅರ್ಥಗಳಿವೆ·ಕನ್ನಡದ ಚಂಪೂ ಕಾವ್ಯಗಳಲ್ಲಿ ಎರಡು ಪದ್ಯಗಳ ನಡುವೆ ಬರುವ ಗದ್ಯಕ್ಕೆ ‘ವಚನ’ ಎಂದು ಕರೆದಿದ್ದಾರೆ·ಆದರೆ ಶರಣರು ಬಳಸಿದ ವಚನ ಎಂಬ ಶಬ್ದವು ವಿಶಿಷ್ಟವಾದ ಅರ್ಥವನ್ನು ಒಳಗೊಂಡಿದೆ·ಅಷ್ಟೇ ಅಲ್ಲದೆ ವಚನ ಎನ್ನುವುದು ಒಂದು ವಿಶಿಷ್ಟ ಸಾಹಿತ್ಯ ರೂಪದ ಹೆಸರೂ ಆಗಿದೆ·ಶರಣರ ದೃಷ್ಟಿಯಲ್ಲಿ ವಚನ ಎಂದರೆ ‘ಗದ್ಯವೆಂದು ಅರ್ಥವಲ್ಲ’ಅದು ‘ನಡೆದಂತೆ ನುಡಿದ ರೀತಿಯೇ ವಚನ’ ಎನಿಸಿಕೊಳ್ಳುತ್ತದೆ·ಅಂದರೆ ‘ಶರಣರು ಪ್ರತೀಜ್ಞಾ ಪೂರಕವಾಗಿ ಹೇಳಿದ ಮಾತುಗಳೆಲ್ಲವೂ(ನುಡಿ) ವಚನಗಳು ಎನಿಸಿಕೊಳ್ಳುವವು’·ಶರಣರ ಆಚರಣೆಗಳು ಸಹ ವಚನಕ್ಕೆ

ವಿಶಿಷ್ಟವಾದ ಅರ್ಥವನ್ನು ಕೊಡುತ್ತವೆ.ಶರಣರ ದೃಷ್ಟಿಯಲ್ಲಿ ವಚನ ಎಂದರೆ 'ಆಡುವ ಮಾತಾಗಿರದೆ ಕೊಟ್ಟ ಮಾತಾಗಿದೆ' ಅಂದರೆ 'ಭಾಷೆ ಕೊಟ್ಟವನು ಅದನ್ನು ನಡೆಸಿದಲ್ಲಿ ಅವನ ಆತ್ಮ ಸಾಕ್ಷಿಯ ನುಡಿಗಳೆಲ್ಲವೂ ವಚನಗಳು ಎನಿಸುತ್ತವೆ'.

**ವಚನ ಸಾಹಿತ್ಯದ ಮೂಲ :** ಶರಣರಿಂದ ರಚಿತವಾದ ವಚನ ಸಾಹಿತ್ಯದ ಮೂಲವನ್ನು ವಿವಿಧ ಸಂಶೋಧಕರು ಬೇರೆ ಬೇರೆ ರೀತಿಯಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ.

- **ಡಿ.ಎಲ್.ನರಸಿಂಹಚಾರ್ :** ಇವರು ವಚನಗಳ ಮೂಲವನ್ನು ತಮಿಳಿನ 'ತೇವಾರಂ'ಗಳಲ್ಲಿ ಕಾಣಬಹುದು ಎಂದಿದ್ದಾರೆ.
- **ಡಾ.ಎಲ್.ಬಸವರಾಜ :** ಅವರು 'ವಚನಕಾರರಿಗೆ ಸಂಸ್ಕೃತದ ಛಂದೋಗ್ರಂಥಗಳಲ್ಲ. ವೇದ,ಉಪನಿಷತ್ ಹಾಗು ಬ್ರಾಹ್ಮಣಕಗಳಲ್ಲಿಯ ಗದ್ಯಗಳೇ ಪ್ರೇರಣೆಯನ್ನು ನೀಡಿವೆ' ಎಂದಿದ್ದಾರೆ.
- **ಡಾ.ಎಂ.ಚಿದಾನಂದಮೂರ್ತಿ :** ಅವರು 'ಕನ್ನಡದ ವಚನಗಳ ಮೂಲವನ್ನು ಅನ್ಯ ಭಾಷೆಯಲ್ಲಿ ಹುಡುಕುವುದು ವಿಹಿತವಲ್ಲ.ಕನ್ನಡದ ದೇಸೀಯ ಛಂದಸ್ಸಾದ ತ್ರಿಪದಿಯಲ್ಲೇ ವಚನಗಳ ಬೇರುಗಳನ್ನು ಕಂಡುಕೊಳ್ಳಲು ಸಾಧ್ಯವಿದೆ' ಎಂದಿದ್ದಾರೆ.
- **ಎಂ.ಆರ್.ಶ್ರೀನಿವಾಸಮೂರ್ತಿ :** ಅವರು 'ವಚನ ಸಾಹಿತ್ಯ ಎರವಲು ತಂದದ್ದಲ್ಲ,ಅದು ಕನ್ನಡದ ಸ್ವಯಾರ್ಜಿತ ಸ್ವತ್ತು'ಎಂದು ಅಭಿಪ್ರಾಯಿಸಿದ್ದಾರೆ.
- **ರಂ.ಶ್ರೀ.ಮುಗಳಿ :** ಅವರು 'ವಚನ ಸಾಹಿತ್ಯ ಕನ್ನಡದ ಒಂದು ವಿನೂತನ ಸೃಷ್ಟಿ'ಎಂದಿದ್ದಾರೆ.

ಹೀಗೆ ವಚನ ಸಾಹಿತ್ಯದ ಮೂಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ಕಂಡು ಬಂದರೂ ಕೂಡ ಕೆಲವರು ಹನ್ನೊಂದನೇ ಶತಮಾನದ ಮಧ್ಯಭಾಗದಿಂದಲೇ ನಮಗೆ ವಚನಗಳು ಕಂಡುಬರುತ್ತವೆ ಎಂದಿದ್ದಾರೆ. ಅಲ್ಲದೇ ವಚನಗಳು ಹೇಗೆ ಹುಟ್ಟಿದವು ಎನ್ನುವುದು ತೊಡಕಿನದಾಗಿದ್ದೂ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆಯಾದ ಬಳಿಕ ಸದ್ಯಕ್ಕಂತೂ ಜೇಡರದಾಸಿಮಯ್ಯನೇ ಆದ್ಯ ವಚನಕಾರ ಎಂದು ಪರಿಗಣಿಸಲಾಗಿದೆ.ದಾಸಿಮಯ್ಯನ ವಚನಗಳಿಂದ ಸ್ಪೂರ್ತಿಯನ್ನು ಪಡೆದುಕೊಂಡು ಬಸವಣ್ಣನವರು ವಚನಗಳನ್ನು ರಚಿಸಿದರು.ಅಲ್ಲದೇ ದಾಸಿಮಯ್ಯನು ಕೂಡ ತನಗಿಂತ ಹಿಂದೆ ವಚನಕಾರರು ಇದ್ದರೆಂಬ ಅರ್ಥ ಬರುವ ಹಾಗೆ ವಚನಗಳನ್ನು ಬರೆದಿದ್ದಾನೆ.ಡೋಹರ ಕಕ್ಕಯ್ಯ,ಕೆಂಭಾವಿ ಭೋಗಣ್ಣನವರ ವಚನಗಳು ಸಿಕ್ಕಿವೆಯಾದರೂ ಇವರನ್ನು ಕೂಡ ದಾಸಿಮಯ್ಯನ ಸಮಕಾಲೀನರೆಂದೇ ಪರಿಗಣಿಸಲಾಗಿದೆ. ಬಸವಣ್ಣನವರು ವಚನಗಳನ್ನು ಹೇಳುತ್ತಾ "ಕನ್ನಡದಲ್ಲಿರುವ ಅತ್ಯಂತ ಪ್ರಾಚೀನವಾದ ಸಾಹಿತ್ಯ ಎಂದರೆ ವಚನ ಪ್ರಕಾರದ್ದು.ಈ ಸಾಹಿತ್ಯ ಪ್ರಕಾರ ಇಡೀ ಭಾರತೀಯ ಸಾಹಿತ್ಯದಲ್ಲಿ ಮತ್ತೆಲ್ಲು ಕಾಣಸಿಗದಷ್ಟು ಅನನ್ಯ ಮತ್ತು ಅಪೂರ್ವ"ಎಂದಿದ್ದಾರೆ.

ಚಿದಾನಂದಮೂರ್ತಿಯವರು "ಅಂದಿನ ಸಾಮಾಜಿಕ,ಧಾರ್ಮಿಕ ಪರಿಸರ ಪ್ರಭಾವಗಳಿಂದ ಆಯಾ ಕ್ಷಣದಲ್ಲಿ ವಚನಕಾರರ ಬಾಯಿಂದ ಹಾಗೇಯೆ ವಚನಗಳು ಮೂಡಿ ಬಂದಿರಬೇಕು" ಎಂದಿದ್ದಾರೆ.

ಹೀಗೆ ಕನ್ನಡ ನಾಡಿನ ಹನ್ನೆರಡನೇ ಶತಮಾನದ ವಿವಿಧ ರಂಗಗಳಲ್ಲಿ ಹೊಸದಾದ ಕ್ರಾಂತಿಯನ್ನು ಮಾಡಿರುವಂತೆ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ತಿರುವನ್ನು ಮೂಡಿಸಬೇಕೆಂಬ ಶರಣರ ಪ್ರಗತಿಪರ ಧೋರಣೆಯ ಫಲವಾಗಿ ಕನ್ನಡದಲ್ಲಿ ಶರಣರಿಂದಲೇ ವಚನಸಾಹಿತ್ಯ ಹುಟ್ಟಿಕೊಂಡಿತೆಂದು ಹೇಳಬಹುದು.

**ವಚನಸಾಹಿತ್ಯದ ಉಗಮಕ್ಕೆ ಕಾರಣಗಳು**

***1*·ರಾಜಕೀಯ ಕಾರಣಗಳು** : ಕಲ್ಯಾಣಿ ಚಾಲುಕ್ಯರಲ್ಲಿ ಅತ್ಯಂತ ಪ್ರಬಲ ದೊರೆಯಾದ ಆರನೇ ವಿಕ್ರಮಾದಿತ್ಯನ ತರುವಾಯ ಬಂದ ಮೂರನೇ ಸೋಮೇಶ್ವರನ ಕಾಲದಲ್ಲಿ ಚಾಲುಕ್ಯ ವಂಶ ಕ್ಷೀಣಿಸುತ್ತ ಹೋಯಿತು·ನಂತರ ಎರಡನೇ ಜಕದೇಕಮಲ್ಲನ ಕಾಲದಲ್ಲಿ ಈ ವಂಶ ಮತ್ತಷ್ಟು ದುರ್ಬಲವಾಯಿತು·ದಕ್ಷಿಣಭಾಗದಲ್ಲಿ ಈ ಸಮಯಕ್ಕಾಗಲೇ ಹೊಯ್ಸಳ ವಂಶದ ಬಿಟ್ಟಿದೇವನ ಪಾಬಲ್ಯ ಅಧಿಕವಾಗಿತ್ತು·ಎರಡನೇ ಜಗದೇಕಮಲ್ಲನ ತರುವಾಯ ಬಂದ ಎರಡನೇ ತೈಲಪನನ್ನು ಮಂಗಳವಾಡೆಯ ರಾಜ ಬಿಜ್ಜಳನು ಎರಡನೇ ತೈಲಪನನ್ನು ಕೊಂದು ತಾನೇ ರಾಜನಾದನು·ಈ ವೇಳೆಗಾಗಲೇ ದಕ್ಷಿಣಭಾರತದಲ್ಲಿ ಮಹಮದೀಯರ ದಾಳಿ ಆರಂಭವಾಗಿತ್ತು·ಈ ರೀತಿಯಾಗಿ ಅಕ್ರಮವಾಗಿ ಸಿಂಹಾಸನಕ್ಕೆ ಬಂದ ಬಿಜ್ಜಳನ ಬಳಿ ಬಸವಣ್ಣ ಕರಣಿಕನಾಗಿ ಕೆಲಸಕ್ಕೆ ಸೇರಿಕೊಂಡನು·ಬಿಜ್ಜಳನಿಗೆ ತಾನು ಮಾಡಿದ ಅಕ್ರಮ ಕೃತ್ಯದ ಬಗ್ಗೆ ಒಳಗೊಳಗೆ ಭಯವಿತ್ತು·ಆದ ಕಾರಣ ರೂಢಿ ಬದ್ಧವಾದ ಸಾಮಾಜಿಕ ವ್ಯವಸ್ಥೆಯನ್ನು ಅಲುಗಾಡಿಸುವ ಯಾವ ಸಂಕ್ರಮಣಗಳು ಆತನಿಗೆ ಬೇಕಾಗಿರಲಿಲ್ಲ·ಆದರೆ ಬಸವಣ್ಣನ ಈ ಆಂದೋಲನ ಮೊದಮೊದಲು ಯಾರ ಗಮನವನ್ನು ಸೆಳೆಯದೇ ಬೃಹತ್ತಾಗಿ ಬೆಳೆದು ಬಿಜ್ಜಳ ಮತ್ತು ಆತನ ಅನುಯಾಯಿಗಳಿಗೆ ಅತ್ಯಂತ ತಲೆನೋವಿನ ಸಂಗತಿಯಾಗಿ ಪರಿಣಮಿಸಿದಾಗ ಅದನ್ನು ಗಮನಿಸುವ ಮತ್ತು ತಡೆಯುವ ಸಾಹಸವನ್ನು ಬಿಜ್ಜಳನು ಕಳೆದುಕೊಂಡಿದ್ದನು·ಹಿಗಾಗಿ ಬಸವಣ್ಣನವರೂ ಕೈಗೊಂಡ ಆಂದೋಲನವು ಯಶಸ್ವಿಯಾಗಿ ಮುನ್ನಡೆಯಲು ಅನುಕೂಲಕರವಾದ ಮತ್ತು ಸೂಕ್ತವಾದ ಸಮಯ ಅದಾಗಿತ್ತು·

**2·ಧಾರ್ಮಿಕ ಅಂಶಗಳು** : ವಚನಸಾಹಿತ್ಯ ಹುಟ್ಟಿದ್ದೇ ಧಾರ್ಮಿಕ ಆಂದೋಲನದ ಅಂಗವಾಗಿ, ಆದರೆ ಅದರ ಮಧ್ಯೆ ಬಸವಣ್ಣನವರ ಕಾಲದಲ್ಲಿದ್ದ ವೀರಶೈವ ಧರ್ಮಕ್ಕೂ ಮತ್ತು ಪೂರ್ವದಲ್ಲಿದ್ದ ವೀರಶೈವ ಧರ್ಮಕ್ಕೂ ಇರುವ ಬೇಧಗಳನ್ನರಿಯುವುದು ಇಂದಿಗೂ ಸಾಧ್ಯವಿಲ್ಲ·ಕಾಳರು,ಕಾಳಮುಖರು,ಕಪಾಲಿಗಳು,ಲಘುಈಶ ಹಾಗು ಪಾಶುಪುತ್ರರು ಎಂಬ ಮೊದಲಾದ ಶೈವ ಪಂಗಡಗಳು ಇದ್ದುದಾಗಿ ತಿಳಿದು ಬರುತ್ತವೆ·

*** ಕಾಳರು :** ಯಾವಾಗಲೂ ಮಧ್ಯಪಾನವನ್ನು ಸೇವಿಸುತ್ತ ಪ್ರತಿನಿತ್ಯ ಸ್ಮಶಾನದಲ್ಲೇ ಜೀವಿಸುತ್ತಿದ್ದರು·
*** ಕಾಳಮುಖರು** : ಸ್ಮಶಾನದಲ್ಲಿನ ಸುಟ್ಟ ವ್ಯಕ್ತಿಗಳ ತಲೆಬುರುಡೆಯಲ್ಲಿ ಅನ್ನವನ್ನು ಬೇಯಿಸಿಕೊಂಡು ತಿನ್ನುವವರು·
*** ಕಪಾಲಿಗಳು** : ಸ್ಮಶಾನದಲ್ಲಿರುವ ಬೂದಿಯನ್ನು ತಮ್ಮ ಮೈಗೆ ಹಚ್ಚಿಕೊಂಡು ಸ್ಮಶಾನದಲ್ಲೇ ವಾಸಿಸುವವರು·

ಇವರಲ್ಲಿ ಕೆಲವರು 'ಸ್ಥಾವರ ಲಿಂಗ' ಆರಾಧಕರು,ಕಠಿಣ ಆಚರಣೆಗಳನ್ನು ಆಚರಿಸುತ್ತಿದ್ದರು· ವಚನಕಾರರು ಈ ಎಲ್ಲ ಆಚರಣೆಗಳನ್ನು ಖಂಡಿಸಿ ಭಕ್ತಿಯೊಂದೇ ಭಗವಂತನನ್ನು ಕಾಣಲು ಇರುವ ಏಕೈಕ ಮಾರ್ಗ ಎಂದು ಸಾರಬೇಕಾಗಿತ್ತು·ಈ ಶೈವಶಾಖೆಗಳೊಂದಿಗೆ ಬೇರೆ ಬೇರೆ ಧರ್ಮಗಳು ಕೂಡ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿದ್ದವು·ಬಸವಣ್ಣನ ಕಾಲದಲ್ಲಿ ಅತ್ಯಂತ ಪ್ರಬಲವಾಗಿದ್ದ ಜೈನಧರ್ಮವೂ ಮಾನವೀಯತೆಯನ್ನು ಬೆಳೆಸುವ ಹಾಗೆ ಅಹಿಂಸೆಯ ಅಧಿಪತ್ಯವನ್ನು ತಲುಪಿತ್ತು·ಬದುಕೆ ಪಾಪ ಎನ್ನುವ ಜೈನಧರ್ಮದ ಧೋರಣೆಗಳು ಹಾಗು ಕಠಿಣವಾದ ಸಲ್ಲೇಖನ ವ್ರತಗಳು ಸಾಮಾನ್ಯ ಮಾನವರಿಗೆ ಎಟುಕದ ವಿಷಯಗಳಾಗಿದ್ದವು·

***3*·ಸಾಹಿತ್ಯಿಕ ಅಂಶಗಳು** : ಪ್ರಾಚೀನ ಕಾವ್ಯ ಪರಂಪರೆ ಚಂಪೂ·ಪಂಪ ಈ ಪ್ರಕಾರದ ದೊಡ್ಡಕವಿ· ಕಾವ್ಯಗಳಿಗೆ ಬಳಸಿದ್ದು ಪುರಾಣ ವಸ್ತುಗಳು,ಭಾಷೆ ಅತ್ಯಂತ ಪ್ರೌಢವಾದುದು·ಜನ ಸಾಮಾನ್ಯರಿಗೆ

ಅರ್ಥವಾಗಲಿಲ್ಲ.ಇಂತಹ ಕಾವ್ಯ ಬರೆಯಲು ಪ್ರಚೋದಿಸಿದ್ದು ರಾಜರು,ಮಂತ್ರಿಗಳು,ಸಾಮಂತರು. ಕಾವ್ಯಗಳ ಉದ್ದೇಶ ರಾಜರನ್ನು ಸಂತೋಷಪಡಿಸುವುದಾಗಿತ್ತು.ಅನಂತರ ಬಂದ ಚಂಪೂ ಕಾವ್ಯಗಳು ಸತ್ವಹೀನವಾಗಿದ್ದವು.ವಚನಕಾರರು ಚಂಪೂವಿಗಿಂತ ವಿಭಿನ್ನ ರೀತಿಯಲ್ಲಿ ವಚನಗಳನ್ನು ರಚನೆ ಮಾಡಿದರು.ಈ ನಿಟ್ಟಿನಲ್ಲಿ ವಚನಕಾರರು ಸಾಮಾಜಿಕ ಆಂದೋಲನಕ್ಕೆ ಕಾರಣೀಕರ್ತರಾದರು.

***4.ಸಾಮಾಜಿಕ ಅಂಶಗಳು :*** ವಚನಸಾಹಿತ್ಯದ ಉಗಮಕ್ಕೆ ಸಾಮಾಜಿಕ ಅಂಶಗಳು ಮುಖ್ಯ ಕಾರಣ.ಜನ ಸಾಮಾನ್ಯರ ಸುಧಾರಣೆ, ಅಂದಿನ ಸಾಮಾಜಿಕ ಸ್ಥಿತಿ ವಚನಕಾರರಿಗೆ ಅನುಕೂಲಕರವಾಗಿತ್ತು. ಯೋಗ್ಯತೆ ಮತ್ತು ಪ್ರತಿಭೆಗಳು ನಿರ್ಧಾರವಾಗುತ್ತಿದ್ದುದು ಜಾತಿಯ ಆಧಾರದ ಮೇಲೆ.ಸೌಲಭ್ಯಗಳು ದೊರಕುತ್ತಿದ್ದುದು ಕೂಡ ಜಾತಿಯ ಆಧರದ ಮೇಲೆಯೇ.ಶೋಷಣೆಗೆ ಸುಲಭ ಮಾರ್ಗ,ಮೇಲು-ಕೀಳು ಎಂಬ ಭಾವನೆ ದೈವ ನಿರ್ಮಾಣದ್ದು ಎಂಬ ಕಲ್ಪನೆ. ಶೋಷಣೆ ಮಾಡುವ ಮೇಲ್ವರ್ಗದವರು ಹಣ,ಅಧಿಕಾರ ಹಾಗು ಅಂತಸ್ತುಗಳನ್ನು ಹೊಂದಿರುತ್ತಿದ್ದರು. ಮೇಲ್ವರ್ಗದವರ ಆಸೆ-ಆಕಾಂಕ್ಷೆಗಳು ಈಡೇರುತ್ತಿದ್ದುದು ಜನ ಸಾಮಾನ್ಯರಿಂದ.ಶಾಸನಗಳಲ್ಲಿ ವರ್ಣಿತವಾಗಿರುವುದು ಮೇಲ್ವರ್ಗದವರ ಕಥೆಗಳೇ ಹೊರತು ಅವರ ಸಲುವಾಗಿ ದುಡಿದ ಕಾರ್ಮಿಕರ ಕಥೆಗಳಲ್ಲ.ವರ್ಣಗಳಲ್ಲಿ ಮೇಲು-ಕೀಳು ಎಂಬ ಭಾವನೆ ನೆಲೆಯೂರಿತ್ತು.ಪ್ರತಿಯೊಂದು ವರ್ಣದಲ್ಲಿಯೂ ಶೋಷಣೆ ನಡೆಯುತ್ತಿತ್ತು.ಸ್ತ್ರೀ ಗಂಡಿಗಿಂತ ಕೀಳು ಎಂಬ ಸಾರ್ವತ್ರಿಕ ಮನೋಭಾವ ಎಲ್ಲ ವರ್ಗದಲ್ಲಿತ್ತು.

## ಪರಾಮರ್ಶನಾ ಗ್ರಂಥಗಳು

*1*.ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ,ಮುಗಳಿ.
*2*.ಕನ್ನಡ ಸಾಹಿತ್ಯ ಚರಿತ್ರೆ – ತ.ಸು.ಶಾಮರಾಯ.
*3*.ಕನ್ನಡ ಸಾಹಿತ್ಯ ಕೋಶ – ರಾಜಪ್ಪ ದಳವಾಯಿ.
*4*.ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಡಾ.ಚಿ.ಸಿ.ನಿಂಗಣ್ಣ.
*5*.ಬಸವತತ್ವ ಸಾಮಾಜಿಕ ಬದಲಾವಣೆ – ಮಹೇಶ ತಿಪ್ಪಶೆಟ್ಟಿ.